

ಮೆಗಲಾನನ ವಿಕ್ಟೋರಿಯಾ ಹಡಗಿನ ಆಧುನಿಕ ಪ್ರತಿರೂಪ

ಚಿತ್ರಕೃಪೆ: ಕ್ರಿಯೇಟೀವ್ ಕಾಮನ್ಸ್

## ಸೆವಿಲ್!

ಶತಶತಮಾನಗಳಿಂದಲೂ ಸ್ಪೇನ್ ದೇಶದ ಈ ನಗರ ಕಡಲಯಾನಕ್ಕೆ ಪ್ರಸಿದ್ಧಿಯಾಗಿದ್ದು, ಇಂದಿಗೂ ಆ ಪ್ರಸಿದ್ಧಿಯನ್ನು ಉಳಿಸಿಕೊಂಡು ಬಂದಿದೆ. ಸುಮಾರು ಐದು ಶತಮಾನಗಳ ಹಿಂದೆ ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳು ಹೊಸ ಹೊಸ ಸ್ಥಳಗಳ ಅನ್ವೇಷಣೆ ನಡೆಸಿ, ಆ ಮೂಲಕ ಕಡಲ ವ್ಯಾಪಾರದ ದೃಷ್ಟಿಯಿಂದ ಅಂದಿನ ಜಗತ್ತಿನಾದ್ಯಂತ ಖ್ಯಾತಿ ಹಾಗೂ ಏಕಸ್ವಾಮ್ಯ (ಮನಾಪಲಿ) ಹೊಂದಿದ್ದಾಗ ಸೆವಿಲ್‌ನ ಪ್ರಾಮುಖ್ಯ ಉತ್ತುಂಗದಲ್ಲಿತ್ತೆನ್ನಬಹುದು.

ಇಂದಿಗೆ 500 ವರ್ಷಗಳ ಹಿಂದೆ (ಸೆಪ್ಟೆಂಬರ್ 8, 1522) ಸರಿಯಾಗಿ 'ವಿಕ್ಟೋರಿಯಾ' ಎಂಬ ಹೆಸರಿನ ಒಂದು ಹಾಯಿ ಹಡಗು ಸೆವಿಲ್‌ನ ಬಂದರನ್ನು ಪ್ರವೇಶಿಸಿತು. 'ಕಾರಾಕ್' ಎಂಬ ಒಂದು ಬಗೆಯ ಆ ಹಡಗಿನ ಬಗ್ಗೆಯಾಗಲೀ, ಅದರ ಕಪ್ತಾನನಾದ 'ಹ್ವಾನ್ ಸೆಬಾಸ್ಟಿಯನ್ ಎಲ್ ಕಾನೋ' ಬಗ್ಗೆಯಾಗಲೀ, ಹಸಿವು ಮತ್ತು ರೋಗರುಜಿನಗಳಿಂದ ಕಂಗೆಟ್ಟಿದ್ದ ಅದರಲ್ಲಿದ್ದ ಇತರ 17 ನಾವಿಕರ ಬಗ್ಗೆಯಾಗಲೀ ಆ ಕ್ಷಣ ಅಲ್ಲಿ ಹೆಚ್ಚು ಆಸಕ್ತಿ ಮೂಡಲಿಲ್ಲ. ಅದಕ್ಕೆ ಬದಲಾಗಿ ಅದರಲ್ಲಿದ್ದ ಸಾಂಬಾರ ಪದಾರ್ಥಗಳು ಅಪಾರವಾದ ಬೆಲೆಗೆ ಮಾರಾಟವಾದ ಮೇಲೆ ಆ ಹಣ ಸ್ಪೇನ್‌ನ ಅರಸ ಐದನೇ ಚಾರ್ಲ್ಸ್‌ನ ಬೊಕ್ಕಸ ಸೇರಿತಷ್ಟೆ.

1519ರ ಆಗಸ್ಟ್ 10ರಂದು ಫರ್ಡಿನೆಂಡ್ ಮೆಗಲಾನನ ನೇತೃತ್ವದಲ್ಲಿ ಸೆವಿಲ್‌ನಿಂದ ಹೊರಟಿದ್ದ ಆ ಮರದ ಹಡಗು ಮಾನವ ಇತಿಹಾಸದಲ್ಲೇ ಅದುವರೆಗೂ ಯಾರೂ ಮಾಡಿಲ್ಲದ ಒಂದು ಮಹತ್ತರವಾದ ಸಾಧನೆಯನ್ನು ಆ ನಂತರದ ಮೂರು ವರ್ಷಗಳ ಅವಧಿಯಲ್ಲಿ ಮಾಡಿ, ತಾನು ಹೊರಟ ಸೆವಿಲ್‌ಗೇ ಅಂದು ಹಿಂತಿರುಗಿತ್ತು. ಅದೇ ಪ್ರಪಂಚ ಪ್ರದಕ್ಷಿಣೆ!

## ಪ್ರಮುಖ ಮೈಲಿಗಲ್ಲು

'ವಿಕ್ಟೋರಿಯಾ' ಹಡಗು ಭೂಮಿಯನ್ನು ಸುತ್ತಿದ ಮೊದಲ ವಾಹನವಾಯಿತು. ಅದರ ಸಾಧನೆ, ಅನ್ವೇಷಣೆಯ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಯಿತು. 'ಭೂಮಿ ಗುಂಡಗಿದೆ' ಎಂಬ ವೈಜ್ಞಾನಿಕ ವಾದಕ್ಕೆ ಬಲವಾದ ಪುರಾವೆ ದೊರಕಿತು. 'ಎಲ್ ಕಾನೋ' ಜಗತ್ತನ್ನು ಸುತ್ತಿದ ಮೊದಲ ಹಡಗಿನ ಮುಖ್ಯನಾವಿಕನಾದ. ಹಾಗೆ ನೋಡಿದರೆ ಜಗತ್ ಪ್ರದಕ್ಷಿಣೆ ಮಾಡಿದ ಮೊದಲ ಮಾನವನೆಂಬ ಖ್ಯಾತಿ ಅವನಿಗೇ ದೊರಕಬೇಕಿತ್ತು. ಆದರೆ, ಎಲ್ ಕ್ಯಾನೋ ಇದ್ದ 'ವಿಕ್ಟೋರಿಯಾ' ಹಡಗೂ ಸೇರಿದಂತೆ ಐದು ಹಡಗುಗಳ ಗುಂಪಿನ ಮುಖ್ಯ ಕಪ್ತಾನನಾಗಿದ್ದ ಫರ್ಡಿನೆಂಡ್ ಮೆಗಲಾನನಿಗೆ ಆ ಖ್ಯಾತಿ ದೊರಕಿದೆ.

'ಸಾಂಬಾರ ಪದಾರ್ಥಗಳ ದ್ವೀಪಗಳಿಗೆ' (ಮೊಲುಕ್ಕಾಸ್, ಇಂದಿನ ಇಂಡೋನೇಷ್ಯಾ ದೇಶಕ್ಕೆ ಸೇರಿದ ಮಲುಕು ದ್ವೀಪಗಳು) ಹೊಸ ಕಡಲ ಹಾದಿಯನ್ನು ಕಂಡುಹಿಡಿಯುವ ಸಲುವಾಗಿ ಐದು ಹಡಗುಗಳ ಸಮೂಹದೊಂದಿಗೆ ಸ್ಪೇನ್‌ನಿಂದ ಪಶ್ಚಿಮ ದಿಕ್ಕಿನಲ್ಲಿ ದಂಡಯಾತ್ರೆ ಹೊರಟ ಮೆಗಲಾನ್, ತನ್ನ ಉದ್ದೇಶ ಸಾಧನೆಗೆ ಸ್ವಲ್ಪವೇ ಮೊದಲು ಇಂದು ನಾವು ಫಿಲಿಪ್ಪೀನ್ಸ್ ಎಂದು ಕರೆಯುವ ದೇಶದಲ್ಲಿ ಹತನಾದ. ಆದರೆ ಅವನ ಸಹಾಯಕನಾದ ಎಲ್ ಕ್ಯಾನೋ ಆ ದ್ವೀಪಗಳನ್ನು ತಲುಪುವುದಷ್ಟೇ ಅಲ್ಲದೆ, ಪೂರ್ವದ ಕಡೆಯಿಂದ ಸ್ಪೇನ್ ಅನ್ನು ಮತ್ತೆ ತಲುಪುವ ಮೂಲಕ ಮೆಗಲಾನ್‌ನ ಕೆಲಸವನ್ನು ಪೂರ್ಣಗೊಳಿಸಿದ ಹಾಗೂ ಪ್ರಪಂಚ ಪ್ರದಕ್ಷಿಣೆಯನ್ನೂ ಮೊದಲಿಗನಾಗಿ ಮಾಡಿದ.

## ಮೆಗಲಾನನ ಯಾನದ ಉದ್ದೇಶ

ಪ್ರಪಂಚ ಪ್ರದಕ್ಷಿಣೆಯನ್ನು ಮಾಡುವ ಉದ್ದೇಶವಿಲ್ಲದಿದ್ದರೂ ಪಶ್ಚಿಮದ ಕಡೆ ಹೊರಟು ಭೂಮಿಯನ್ನು ಸುತ್ತುಹಾಕುವ ಮೂಲಕ ಪೂರ್ವಾರ್ಧಗೋಳದಲ್ಲಿರುವ ಏಷ್ಯಾದ ಸಾಂಬಾರ ಪದಾರ್ಥಗಳ ದ್ವೀಪಗಳಿಗೆ (ಸ್ಪೈಸ್ ಐಲ್ಯಾಂಡ್ಸ್) ಹೊಸ ಹಾದಿಯನ್ನು ಕಂಡುಹಿಡಿದ ಮೆಗಲಾನ್, ಜಗತ್ತನ್ನು ಸುತ್ತಿದ ಮೊದಲ ಮಾನವ ಎಂದೇ ಖ್ಯಾತನಾಗಿದ್ದಾನೆ. ಇದನ್ನು ನಾವು ಪ್ರೌಢಶಾಲೆಯ ಪಠ್ಯಪುಸ್ತಕದಲ್ಲಿ ಓದಿ ಬಹುಶಃ ಮರೆತೂ ಬಿಟ್ಟಿರುತ್ತೇವೆ! ಆದರೆ, ಜಗತ್ತನ್ನು ಮೊದಲ ಬಾರಿಗೆ ಸುತ್ತಿದ ಮೆಗಲಾನನ ಮಹಾಯಾನ ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗಿರುವ ವಿಷಯವಲ್ಲ. ಮಾನವನ ಸಾಹಸಪ್ರವೃತ್ತಿಯ ಪ್ರತೀಕವಾಗಿದೆ. ಅನೇಕರಿಗೆ ಪ್ರೇರಕ ಶಕ್ತಿಯಾಗಿದೆ. ಕುತೂಹಲ